# ಶ್ರೀಮದಾನಂದತೀರ್ಥ ಭಗವತ್ಪಾದರ ಪರವಾದ ಕೀರ್ತನೆಗಳ ಸಂಗ್ರಹ

Contributed by Sudhavittal

ರಾಗ – ನಾದನಾಮಕ್ರಿಯೆ ಅಟ್ಟತಾಳ

ಮರುದಂಶರ ಮತ ಪಿಡಿಯದೆ ಇಹ
ಪರದಲ್ಲಿ ಸುಖವಿಲ್ಲವಂತೆ ॥ ಪ ॥

ಅರಿತು ವಿವೇಕದಿ ಮರೆಯದೆ ನಮ್ಮ
ಗುರುರಾಯರ ನಂಬಿ ಬದುಕಿರೋ ॥ ಅ ಪ ॥

ಕ್ಷೀರವ ಕರೆದಿಟ್ಟ ಮಾತ್ರದಿ ಸಂ
ಸ್ಕಾರವಿಲ್ಲದೆ ಘೃತವಾಗದಂತೆ
ಸೂರಿಜನರ ಸಂಗವಿಲ್ಲದೆ ಸಾರ
ವೈರಾಗ್ಯಭಾಗ್ಯ ಪುಟ್ಟದಂತೆ ॥ ೧ ॥

ಉಪದೇಶವಿಲ್ಲದ ಮಂತ್ರ ಏಸು
ಜಪಿಸಲು ಫಲಗಳ ಕೊಡದಂತೆ
ಉಪವಾಸ-ವ್ರತಗಳಿಲ್ಲದೆ ಜೀವ
ತಪಸಿಯೆನಿಸಿಕೊಳ್ಳ ಲರಿಯನಂತೆ ॥ ೨ ॥

ಸಾರ ಮಧ್ವಶಾಸ್ತ್ರವೋದದೆ ಗುರು
ತಾರತಮ್ಯಜ್ಞಾನ ಪುಟ್ಟದಂತೆ
ಶ್ರೀರಂಗವಿಠ್ಠಲನ ಭಜಿಸದೆ ಮುಂದೆ
ಪರಮಗತಿ ದೊರಕೊಲ್ಲದಂತೆ ॥ ೩ ॥

-------- ಶ್ರೀಪಾದರಾಜ ಶ್ರೀಚರಣರು

ರಾಗ ಮೋಹನ ಮಿಶ್ರಛಾಪುತಾಳ

ಈತನೇ ಕಾಣಿರೋ ಮಧ್ವಮುನಿ ॥ ಪ ॥

ಪರಿಪರಿ ಶ್ರುತಿಗಳೆಂಬ ಗುಹೆಗಳಲ್ಲಿ ಕೇ
ಸರಿಯಂತೆ ಚರಿಸುತ್ತ
ಹರಿಯೆ ಸರ್ವೋತ್ತಮನೆಂಬ ಘೋಷಗಳಿಂದ
ದುರುಳವಾದಿಗಳೆಂಬ ನರಿಗಳೋಡಿಸಿದಾತ ॥ ೧ ॥

ಸಕಲಾಗಮಗಳೆಂಬ ಶರಧಿಯೊಳಗೆ
ಮುಕುತಿಯಲಿ ಮಥಿಸಿ
ಅಕಳಂಕ ಶ್ರೀಹರಿಯೆಂಬ ರತ್ನವ ಕಂಡು
ಮುಕುಟದೊಳಗಿಟ್ಟು ಲೋಕದಿ ಮೆರೆದಾತ ॥ ೨ ॥

ವೇದಸಾರನೆಂಬ ಈಶತತ್ತ್ವವಾದ
ಸುಧೆಯ ಕಲ್ಪಿಸಿಕೊಂಡು
ಆದಿಮೂರುತಿ ಶ್ರೀಹಯವದನನ ದಿವ್ಯ
ಪಾದಸೇವಕನಾದ ಮಧ್ವಮುನಿಯೆಂಬಾತ ॥ ೩ ॥

----------ಶ್ರೀವಾದಿರಾಜಶ್ರೀಚರಣರು

## ಶ್ರೀ ಜಗನ್ನಾಥದಾಸರ ಸ್ತೋತ್ರ
(ಭಾದ್ರಪದ ಶುದ್ಧ ಶ್ರೀ ಜಗನ್ನಾಥದಾಸರ ಪುಣ್ಯ ಸ್ಮರಣೆಗಾಗಿ)

ಶ್ರೀಕಾಂತೊಲಿದ ದಾಸ । ರೀಕಲಿಯುಗದಲ್ಲಿ।
ಲೇಖಾಂಶರಹುದೇ ತಂಗೀ ॥
ಶೋಕ ಬ್ಯಾಡಲೆ ನರಲೋಕ ಉಳಿದರೆಂದು।
ಈ ಕಂಭದೊಳಗಿಹರೇ । ಹೇ ನೀರೇ ॥ ಪ ॥

ಆಶೇತೂ ಮೊದಲಾದ ಹಿಮಾಶೈಲ ಪರಿಯಂತ ।
ಸೂಸಿಹದಿವರ ಕೀರ್ತಿ ॥
ಯೇಸು ಬಗಿಯಲಿಂದ, ಸೋಸಿ ನೋಡಿದರನ್ನು ।
ಪಾಸಟಿ ಯನಿಸದಲ್ಲೇ । ಯೇನಲ್ಲೆ ॥೧॥

ನರ ಮೋಹನಾರ್ಥವಾದರು ಲೌಕೀಕೆಂಬುದೂ ।
ಅರಿಯಾರು ಸ್ವಪ್ನದಲ್ಲೀ ॥
ಧುರಿಯೊಳಖಿಳ ಸಜ್ಜನರು ಪರಿಕ್ಷಿಸಿಹರು ।
ಬರಿದೆ ಸ್ತವನ ವಲ್ಲಾವೆ । ಕೇಳಲವೇ ॥೨॥

ಹರಿಕೃಪಿ ನೋಡು ಇವರಿಗೆ ಜನರು ಎಷ್ಟು ।
ಜರಿದಾರು ಮನ್ನಿಪರೂ ॥
ಕರಣ ತ್ರಯದ ಶುದ್ಧರೆರಡು ಮಾರ್ಗವ ಬಲ್ಲ ।
ವರು ನಿತ್ಯಾಚರಿಸಿದರೂ । ಹಿರಿಯಾರೂ ॥೩॥

ಇವರಂದ ನುಡಿಯನು ಭವಕೆ ತಂದರೆಲೇಶ ।
ಭವ ದುಃಖವಾಗದಲ್ಲಾ ॥
ಜವದೊರವದು ಮುಕ್ತಿ ಜವನ ಬಾಧಿಲ್ಲಾಶು ।
ಕವಿಕುಲ ತಿಲಕರಿಗೇ । ನೀಯರಿಗೇ ॥೪॥

ಖಳಹ ಪ್ರಾಣೇಶ ವಿಠಲನ ಚರಿತೆ ಪದ ।
ಗಳಲ್ಲಿ ಬಣ್ಣಿಸಿ ಸಂತತೀ ॥
ನಿಲಿಸಿ ಜ್ಞಾನಿಗಳನ್ನು ತಲಿತೂಗಿಸಿದರುಪೇ ।
ಳಲು ಎನ್ನಮತಿ ಸಾಲದೂ । ಸತ್ಯವಿದೂ ॥೫॥